# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ , ಮೈಸೂರು

| ಎಸ್. ಸಿ. | 34/2018 |
|---|---|

| | | | |
|---|---|---|---|
| ಸಾಕ್ಷಿದಾರರ ಹೆಸರು | : ಶ್ರೀ ಕಾರ್ತಿಕ್ ಎನ್. | ಪ್ರಮಾಣ ಮಾಡಿಸಿದ ದಿನಾಂಕ 08.01.2021 | |
| ತಂದೆ ಹೆಸರು | : ಶ್ರೀ ನಟರಾಜ್ | | |
| ವಯಸ್ಸು | : 29 ವರ್ಷ | | |
| ವೃತ್ತಿ | : ಆಟೋ ಚಾಲಕ | PW: | 20 |
| ವಾಸಸ್ಥಳ | : ಕ್ಯಾತಮಾರನಹಳ್ಳಿ, ಮೈಸೂರು | CW: | 16 |

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

. ನಾನು ಆಟೋ ಚಾಲಕ ಕೆಲಸ ಮಾಡಿಕೊಂಡಿದ್ದು, ಸ್ವಲ್ಪ ಸಮಯ ಟ್ರಾವಲ್ಸ್ ನಲ್ಲಿ ಕೆಲಸ ಮಾಡಿಕೊಂಡಿದ್ದೆ. ಮೃತ ರಾಜು ನನ್ನ ಮಾವ. ಸುಮಾರು 4-5 ವರ್ಷಗಳ ಹಿಂದೆ ರಾಜು ಅವರು ಉದಯಗಿರಿ, ಮೈಸೂರಿನಲ್ಲಿ ಮೃತಪಟ್ಟಿರುತ್ತಾರೆ. ಕಾರಣ ಗೊತ್ತಿಲ್ಲ. ರಾಜು ಸಾಯುವ ಮೊದಲು ನಾನು ಅವರನ್ನು ಅಥವಾ ಅವರು ನನ್ನನ್ನು ಭೇಟಿ ಮಾಡಿರಲಿಲ್ಲ. ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿಲ್ಲ. ಆರೋಪಿಗಳನ್ನು ಗುರುತಿಸುವ ಬಗ್ಗೆ ನಾನು ಸಿ.ಸಿ.ಬಿ. ಕಛೇರಿಗೆ ಭೇಟಿ ನೀಡಿಲ್ಲ ಮತ್ತು ಆರೋಪಿಗಳನ್ನು ಗುರುತಿಸಿಲ್ಲ.

(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-**

. ದಿನಾಂಕಃ 13.03.2016 ರಂದು ಸಂಜೆ 4.30 ರ ವೇಳೆಯಲ್ಲಿ ನಾನು ವಿನಾಯಕ ಟೀ ಸ್ಟಾಲ್ ಮುಂಭಾಗ ನನಗೆ ಪರಿಚಯ ಇದ್ದ ರಾಜು ಅಲಿಯಾಸ್ ಆರ್.ಎಸ್.ಎಸ್. ರಾಜು ಮತ್ತು ಜಯಕುಮಾರ್ ಅವರನ್ನು ಮಾತನಾಡಿಸಿಕೊಂಡು ಬಸಪ್ಪಾಜೀ ಸರ್ಕಲ್ ಕಡೆ ಹೋಗುತ್ತಿದ್ದಾಗ ಇಬ್ಬರೂ ಯುವಕರು

ಉದಯಗಿರಿಯ ಎಂ.ಜಿ. ರಸ್ತೆಯಲ್ಲಿರುವ ಗೋವಿಂದನ ಕೋಳಿ ಅಂಗಡಿಯ ಬಳಿ ಓಡಾಡುತ್ತಾ ವಿನಾಯಕ ಟೀ ಸ್ಟಾಲ್ ಬಳಿ ನೋಡುತ್ತಾ ಅನುಮಾನಸ್ಪದವಾಗಿ ತಿರುಗಾಡುತ್ತಿದ್ದದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪಾಜೀ ಸರ್ಕಲ್ ಕಡೆ ಹೋಗಿ ಕೆಲಸ ಮುಗಿಸಿ ಸ್ವಲ್ಪ ಹೊತ್ತಿನ ನಂತರ ಅದೇ ರಸ್ತೆಯಲ್ಲಿ ವಾಪಸ್ಸು ಬಂದಾಗ ವಿನಾಯಕ ಟೀ ಸ್ಟಾಲ್ ಹತ್ತಿರ ಜನರು ತುಂಬಿದ್ದು ನಾನು ವಿಚಾರಿಸಲಾಗಿ ಆರ್.ಎಸ್.ಎಸ್ ರಾಜು ಅವರಿಗೆ ಯಾರೋ ಲಾಂಗ್ ನಿಂದ ಹಲ್ಲೆ ಮಾಡಿ ಸೀರಿಯಸ್ ಆಗಿ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ತಿಳಿದಿರುತ್ತೇನೆ ಎಂದರೆ ಸರಿಯಲ್ಲ. ಬಸಪ್ಪಾಜೀ ಸರ್ಕಲ್ ಬಳಿ ಅನುಮಾನಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಗಳು ಹಲ್ಲೆ ಮಾಡಿದ ಬಗ್ಗೆ ತಿಳಿದಿರುತ್ತೇನೆ ಎಂದರೆ ಸರಿಯಲ್ಲ. ರಾಜು ಅವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟ ಬಗ್ಗೆ ತಿಳಿದಿರುತ್ತೇನೆ ಮತ್ತು ಅನುಮಾನಸ್ಪದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುವುದಾಗಿ ನನಗೆ ಈಗ ಓದಿ ಹೇಳಿದಂತೆ ನಿ.ಪಿ.31 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 12.08.2016 ರಂದು ನನ್ನನ್ನು ಸಿ.ಸಿ.ಬಿ. ಪೊಲೀಸ್ ಅಧಿಕಾರಿಯವರು ತಮ್ಮ ಕಛೇರಿಗೆ ಕರೆಸಿ ತಮ್ಮ ವಶದಲ್ಲಿದ್ದ 3 ನೇ ಆರೋಪಿಯನ್ನು ನನಗೆ ತೋರಿಸಿದ ಮೇರೆಗೆ ನಾನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿಯನ್ನು ನಾನು ವಿನಾಯಕ ಟೀ ಸ್ಟಾಲ್ ಮುಂಭಾಗ ನೋಡಿದ ಬಗ್ಗೆ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಮತ್ತು ಇತರರು ರಾಜು ಅವರನ್ನು ಕೊಲೆ ಮಾಡಿರುವುದಾಗಿ ಮತ್ತು ನಾನು ಗುರುತಿಸಿದ ಬಗ್ಗೆ ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಿ.ಪಿ.32 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 02.09.2016 ರಂದು ನನ್ನನ್ನು ಸಿ.ಸಿ.ಬಿ. ಪೊಲೀಸ್ ಅಧಿಕಾರಿಯವರು ತಮ್ಮ ಕಛೇರಿಗೆ ಕರೆಸಿ ತಮ್ಮ ವಶದಲ್ಲಿದ್ದ 4 ನೇ ಆರೋಪಿಯನ್ನು ನನಗೆ ತೋರಿಸಿದ ಮೇರೆಗೆ ನಾನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿಯನ್ನು ನಾನು ವಿನಾಯಕ ಟೀ ಸ್ಟಾಲ್ ಮುಂಭಾಗ ನೋಡಿದ ಬಗ್ಗೆ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ಮತ್ತು ಇತರರು ರಾಜು ಅವರನ್ನು ಕೊಲೆ ಮಾಡಿರುವುದಾಗಿ ಮತ್ತು ನಾನು ಗುರುತಿಸಿದ ಬಗ್ಗೆ ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಿ.ಪಿ.33 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಗೋವಿಂದ ಅವರ ಕೋಳಿ ಅಂಗಡಿಯ ಬಳಿ 3 ಮತ್ತು 4 ನೇ ಆರೋಪಿಗಳು ಅನುಮಾನಸ್ಪದವಾಗಿ ಓಡಾಡಿದ ಬಗ್ಗೆ ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನನಗೆ ಮಾಹಿತಿ ಇದ್ದರೂ 3 ಮತ್ತು 4 ನೇ ಆರೋಪಿಗಳನ್ನು ಗುರುತಿಸಿಲ್ಲ ಎಂದು ಆರೋಪಿಗಳಿಗೆ ಸಹಾಯ

ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿಗಳ ಪರ ವಕೀಲರಿಂದ ಪಾಟೀ ಸವಾಲು ಇಲ್ಲ.**

**ಮರುವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ.,**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**
**ಮೈಸೂರು.**